ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದಲ್ಲಿ ಅಂಥವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಂಡು, ದಂಡ ವಿಧಿಸಲಾಗುತ್ತಿದೆ. ಹಾಗೂ ರಾತ್ರಿ ಕಾವಲು ಪಹರೆಯನ್ನು ನೇಮಿಸಿ ನಿರ್ವಹಿಸಲಾಗುತ್ತಿದೆ.

235 (432): ಶ್ರೀ ನಿಂಗಪ್ಪ ಹೆಚ್. (ಕುಣಿಗಲ್)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿ ವಿದ್ಯುತ್ ಉಪಕೇಂದ್ರವು (ಎಂ.ಯು.ಎಸ್.ಎಸ್) ಮಂಜೂರಾತಿಯಾಗಿದ್ದರೂ ಈ ತನಕ ಕಾರ್ಯಾರಂಭವಾಗದಿರಲು ಇರುವ ತೊಂದರೆಗಳೇನು;

ಆ. ಶೀಘ್ರ ಕಾರ್ಯಾರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ.ಆ. ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ (ಎಂ.ಯು.ಎಸ್.ಎಸ್.) ಸಂಬಂಧಿಸಿದ ವಿವರವಾದ ಯೋಜನಾ ವರದಿಗೆ ಕವಿಪ್ರನಿನಿಯು ಆಗಸ್ಟ್ 2005ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ಆಡಳಿತಾತ್ಮಕ ಮಂಜೂರಾತಿ ಆದ ನಂತರವೇ ಕಾಮಗಾರಿಯ ನಿರ್ವಹಣೆಗೆ ಟೆಂಡರ್‌ಗಳನ್ನು ಆಹ್ವಾನಿಸಲು ಸಾಧ್ಯವಾಗುತ್ತದೆ. ಅಲ್ಲದೇ, ಆರ್ಥಿಕ ಹೊಂದಾಣಿಕೆಯೂ ಆಗಬೇಕಾಗಿರುತ್ತದೆ. ದಿನಾಂಕ: 17.02.2006ರಂದು 'ಟರ್ನ್ ಕೀ' ಆಧಾರದಲ್ಲಿ ಈ ಕಾಮಗಾರಿಯ ನಿರ್ವಹಣೆಗೆ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ಗಳ ಸ್ವೀಕೃತಿಗೆ 28.03.2006 ಕೊನೆಯ ದಿನಾಂಕವಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯು ಸಂಪೂರ್ಣಗೊಂಡ ನಂತರ, ಗುತ್ತಿಗೆದಾರರನ್ನು ಗೊತ್ತುಪಡಿಸಲಾಗುತ್ತದೆ. ಗೊತ್ತುಪಡಿಸಲಾಗುವ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿಕೊಟ್ಟನಂತರ ಸದರಿ ವಿದ್ಯುತ್ ಉಪ-ಕೇಂದ್ರದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

236 (78): ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬೀಳಗಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ.ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;